# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | | 1786 |
| ಮಾನ್ಯ ಸದಸ್ಯರ ಹೆಸರು | | ಡಾ: ತಳವಾರ್ ಸಾಬಣ್ಣ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 14-03-2022 |
| **ಪ್ರಶ್ನೆ** | | **ಉತ್ತರ** |
| (ಅ) | ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತ ಡಾ: ಗಂಗೂಬಾಯಿ ಹಾನಗಲ್ ಹೆಸರಿನಲ್ಲಿ 2009ರಲ್ಲಿಯೇ ಸ್ಥಾಪಿತವಾದ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಮೂಲಭೂತ ಸೌಕರ್ಯಗಳ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; | ಬಂದಿದೆ. |
| (ಆ) | ವಿಶ್ವವಿದ್ಯಾಲಯವು ಸ್ಥಾಪನೆಯಾಗಿ 12 ವರ್ಷಗಳಾದರೂ ಸ್ವಂತ ಕಟ್ಟಡ UGC 12 B ಗೆ ಬೇಕಾದಷ್ಟು ಶಿಕ್ಷಕರ ನೇಮಕಾತಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; | ಬಂದಿದೆ |
| (ಇ) | ಅನುದಾನದ ಕೊರತೆ ನೀಗಿಸಲು ವಿಶ್ವವಿದ್ಯಾಲಯದ ಮೂಲಗಳು ಸಾಕಷ್ಟು ಇಲ್ಲದಿದರುವುದಕ್ಕೆ ಸರ್ಕಾರ ಯಾವ ರೀತಿಯ ಪರಿಹಾರ ನೀಡಿದೆಯೇ; | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಈ ವಿಶ್ವವಿದ್ಯಾಲಯಕ್ಕೆ ಅನುದಾನದ ಕೊರತೆ ನೀಗಿಸಲು (ಲೆಕ್ಕ ಶೀರ್ಷಿಕೆ; 2205-00-101-0-08) ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಹಂಚಿಕೆ ಮಾಡಲಾಗಿದೆ. (see table below) |

| ಉದ್ದೇಶ | 2019-20 | 2020-21 | 2021-22 |
|---|---|---|---|
| ವೇತನಗಳು | 128.52 | 72.00 | 31.00 |
| ಸಾಮಾನ್ಯ | 200.00 | 50.00 | 50.00 |

...2

| | | |
|---|---|---|
| (ಈ) | ಡಾ: ಗಂಗೂಬಾಯಿ ಹಾನಗಲ್ ಹೆಸರಿನಲ್ಲಿರುವ ವಿಶ್ವವಿದ್ಯಾಲಯವನ್ನು ಬೆಳೆಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಕರ್ನಾಟಕ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು-2009 ರಲ್ಲಿ ಸ್ಥಾಪನೆ ಮಾಡಲಾಗಿದ್ದು, ಕರ್ನಾಟಕ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕ್ಷೇತ್ರದಲ್ಲಿ ಉಜ್ವಲ ಪರಂಪರೆ ಇರುವುದರಿಂದ ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಸಂಶೋಧನೆ ಮತ್ತು ಕಲಿಕೆಯ ಮುನ್ನಡೆಗಾಗಿ ಅವಕಾಶವನ್ನು ಕಲ್ಪಿಸಿ, ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ವಿಭಾಗಗಳಲ್ಲಿ ಶಿಕ್ಷಣ ದೊರೆಯುವಂತೆ ಮಾಡುವುದು ಸಂಗೀತ ಮತ್ತು ಪ್ರದರ್ಶಕ ಕಲಾ ವಿದ್ವಾಂಸರು ಮತ್ತು ಸಂಬಂಧಪಟ್ಟ ವಿದ್ಯಾವಿಷಯಗಳ ವಿದ್ವಾಂಸರು ತಮ್ಮ ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕಾಗಿ ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಅನುಕೂಲವಾಗಿದೆ.<br><br>ಸದರಿ ವಿಶ್ವವಿದ್ಯಾನಿಲಯವನ್ನು ಬೆಳೆಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮೈಸೂರು-ಟಿ.ನರಸೀಪುರ ರಸ್ತೆಯಲ್ಲಿರುವ ಸರ್ದಾರ ವಲ್ಲಭಬಾಯಿ ಪಟೇಲ್ ನಗರದಲ್ಲಿ ನೀಡಿರುವ ಬದಲಿ ಭೂಮಿಯಲ್ಲಿ ವಿಶ್ವವಿದ್ಯಾಲಯದ ಸ್ವಂತ ಆಡಳಿತ, ಶೈಕ್ಷಣಿಕ, ಸ್ನಾತಕೋತ್ತರ ಕೇಂದ್ರ ಸ್ಥಾಪನೆ, ವಿದ್ಯಾರ್ಥಿನಿಲಯ ಮತ್ತು ಸಭಾಂಗಣ ಕಟ್ಟಡಗಳನ್ನು ನಿರ್ಮಾಣ ಮಾಡಲು ಪರಿಷ್ಕೃತ ಅನುಮೋದನೆ ನೀಡುವಂತೆ ಕೋರಿರುವ ಬಗ್ಗೆ ಪರಿಶೀಲಿಸಲು ವಿಸ್ತೃತ ಅಂದಾಜು (detailed estimate) ಹಾಗೂ ಅವಶ್ಯವಿರುವ ಪೀಠೋಪಕರಣ ಮತ್ತು ಸಲಕರಣೆಗಳ ವೆಚ್ಚಗಳನ್ನೂ ಸಹ ಅಂದಾಜಿಸಿ ಒಟ್ಟಾರೆ ಅಂದಾಜು ಮೊತ್ತಕ್ಕೆ ಸಕಾರಣಗಳೊಂದಿಗೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. |

ಸಂಖ್ಯೆ: ಇಡಿ 80 ಯುಎನ್‌ಇ 2022

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು